# ಇರಬೇಕು ಇರದಿರಬೇಕು ಸಂಸಾರದಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 72.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 369.
3. **Note:** Lyrics in these reference books are same and the singer has followed these wordings.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ಪೂರ್ವಿ ತಾಳ: ಆದಿ

ಇರಬೇಕು ಇರದಿರಬೇಕು || ಪ ||
ಸಂಸಾರದಿ ಜನಕಾದಿ ರಾಜಋಷಿಗಳಂತೆ || ಅಪ ||

ಮಿಥಿಲಾ ಪಟ್ಟಣವು ದಹಿಸಿತೆಂಬುದ ಕೇಳಿ
ಮಿಥಿಲೇಶ "ಮಮ ಕಿಂಚಿನ್ನ ದಹ್ಯತೇ" ಎಂಬಂತೆ ಇರಬೇಕು || 1 ||

ದಧೀಚಿ ಋಷಿ ತನ್ನ ಅಸ್ಥಿ ಸುರರಿಗಿತ್ತು
ಮಧುವೈರಿ ವೈಕುಂಠ ಪುರವಿತ್ತ ತೆರದಂತೆ ಇರಬೇಕು || 2 ||

ಪುರಂದರ ವಿಠಲನ್ನ ದಾಸರ ಸಂಗಡ
ಪುತ್ರ ಮಿತ್ರ ಕಳತ್ರ ಬಂಧುಗಳಂತೆ ಇರಬೇಕು || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಜನಕಾದಿ...** – ಮಿಥಿಲಾನಗರದ ದೊರೆಯಾಗಿದ್ದ ಜನಕ ಅಧ್ಯಾತ್ಮತತ್ತ್ವನ್ನು ಬಲ್ಲವನು. ಅವನ ಆಸ್ಥಾನದಲ್ಲಿ ಯಾವಾಗಲೂ ತತ್ತ್ವಶಾಸ್ತ್ರವನ್ನು ಕುರಿತು ಜಿಜ್ಞಾಸೆ ನಡೆಯುತ್ತಲೇ ಇದ್ದಿತು. ಒಮ್ಮೆ ಹೀಗೆ ದಾರ್ಶನಿಕರೊಂದಿಗೆ ಸಂವಾದಮಾಡುತ್ತ ಕುಳಿತಿದ್ದಾಗ ಅವನ ವಿರಕ್ತಿಯನ್ನೂ ಚಿತ್ತಸ್ಥೈರ್ಯವನ್ನೂ ಪರೀಕ್ಷಿಸಲು ಮಿಥಿಲಾನಗರದಲ್ಲಿ ಬೆಂಕಿ ಎದ್ದಂತೆ ಋಷಿಗಳು ತೋರಿಸಿ ಅವನಿಗೆ ಈ ಸುದ್ದಿ ಮುಟ್ಟಿಸಲು, ಜನಕನು ಒಂದಿಷ್ಟೂ ಉದ್ವೇಗಗೊಳ್ಳದೆ "ನನ್ನದೆಂಬುದೇನು ಸುಟ್ಟುಹೋಗಲಾರದು" ('ಮಮ ಕಿಂಚಿನ್ನ ದಹತ್ಯತೇ') ಎಂದು ಹೇಳಿದನಂತೆ. ಇಲ್ಲಿ 'ನನ್ನದೆ'ಂದರೆ ಆತ್ಮಗುಣಗಳು; ಅವಕ್ಕೆ ಹುಟ್ಟು–ಸಾವು ಮೊದಲಾದ ವಿಕಾರಗಳಿಲ್ಲವೆಂದು ಇಂಗಿತ.

**ದಧೀಚಿ** – ಸ್ವಾಯಭುವ ಮನ್ವಂತರದಲ್ಲಿದ್ದ ಒಬ್ಬ ಋಷಿ; ಭೃಗುಮಹರ್ಷಿಯ ಮಗ. ಇಂದ್ರನಿಂದ ಮಧುವಿದ್ಯೆಯನ್ನು ಕಲಿತು ಅಶ್ವಿನಿದೇವತೆಗಳಿಗೆ ಹೇಳಿಕೊಟ್ಟ. ಇವನು ಸರಸ್ವತೀ ತೀರದಲ್ಲಿ ತಪಸ್ಸು ಮಾಡುತ್ತಿದ್ದಾಗ ದೇವತೆಗಳು ಬಂದು ತಮ್ಮ ಅಸ್ತ್ರಗಳನ್ನೆಲ್ಲ ಇವನಲ್ಲಿ ನ್ಯಾಸವಾಗಿ ಇಟ್ಟುಹೋದರು. ಬಹು ಕಾಲದವರೆಗೂ ದೇವತೆಗಳು ಅಸ್ತ್ರಕ್ಕಾಗಿ ಬರದಿರಲು, ಅಸ್ತ್ರಗಳನ್ನು ದಧೀಚಿ ನೀರಿಗೆಸೆದುಬಿಟ್ಟ. ಅನಂತರ ದೇವತೆಗಳು ಬಂದು ತಮ್ಮ ಅಸ್ತ್ರಗಳನ್ನು ಕೇಳಿದಾಗ "ಅವೆಲ್ಲ ನನ್ನ ಮೂಳೆಗಳಲ್ಲಿ ಬೆರೆತುಹೋಗಿವೆ. ನನ್ನ ಮೂಳೆಗಳನ್ನೇ ತೆಗೆದುಕೊಂಡು ವಿಶ್ವಕರ್ಮನಿಂದ ನಿಮಗೆ ಬೇಕಾದ ಅಸ್ತ್ರಗಳನ್ನು ಮಾಡಿಸಿಕೊಳ್ಳಿರಿ" ಎಂದು ಹೇಳಿ ಯೋಗ ಬಲದಿಂದ ದೇಹತ್ಯಾಗಮಾಡಿದ. ದೇವತೆಗಳು ಹಾಗೆಯೇ ಮಾಡಿದರು.

**Classification:** Keerthane
**Ankita:** purandara vittala
**Location:** NA
**Category:** Jeevana Darshana
**Sub-Category:** samsara, janaka, Mithila, rushi, dadichi, vaikunta, sura, putra, mitra, bandhu, shatru,
**Pravachana:** Vid Mannur Ramachandrachar
**Explanation:** NA